# ಕರ್ನಾಟಕ ಅರಣ್ಯ ಇಲಾಖೆ

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003**

**ಸಂಖ್ಯೆ: ಬಿ9-ನೇಮಕಾತಿ-ವಿವ-1/2011-12 ದಿನಾಂಕ 12-12-2011**

## ಪ್ರಕಟಣೆ

ಈ ಕಚೇರಿಯ ದಿನಾಂಕ 11-9-2013ರ ಹಾಗೂ 12-11-2013ರ ಪ್ರಕಟಣೆಯನ್ನು ಮುಂದುವರೆಸುತ್ತಾ, 596 ಅರಣ್ಯ ರಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ದಿನಾಂಕ 12-12-2011 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಈ ಪೈಕಿ ಈಗಾಗಲೇ 549 ಅರಣ್ಯ ರಕ್ಷಕ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಭರ್ತಿ ಮಾಡಲು ಬಾಕಿ ಇರುವ 47 ಹುದ್ದೆಗಳ ಪೈಕಿ 42 ಹುದ್ದೆಗಳಿಗೆ ಮೆರಿಟ್ ಆಧಾರದ ಮೇಲೆ ಹಾಗೂ ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಪ್ರಚಲಿತ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಅನ್ವಯ 42 ಅರಣ್ಯ ರಕ್ಷಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ಪಟ್ಟಿಯನ್ನು ಅನುಬಂಧ-ಎ. ಯಲ್ಲಿ ಪ್ರಕಟಿಸಲಾಗಿದೆ.

ಅನುಬಂಧ-ಎ. ಪಟ್ಟಿಯಲ್ಲಿ ತೋರಿಸಿರುವ ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆ ಹೊಂದಿದ 42 ಅಭ್ಯರ್ಥಿಗಳು ಅವರ ಹೆಸರಿನ ಮುಂದೆ ತೋರಿಸಿರುವ ಕಚೇರಿಯ ಮುಖ್ಯಸ್ಥರ ಎದುರು ದಿನಾಂಕ 26-12-2013 ರೊಳಗಾಗಿ ಹಾಜರಾಗಿ ಮುಂದಿನ ನಿರ್ದೇಶನ ಪಡೆಯುವುದು. ವೃತ್ತಿ ತರಬೇತಿಯು ಅರಣ್ಯ ರಕ್ಷಕ ತರಬೇತಿ ಸಂಸ್ಥೆ, ಇಲವಾಲ, ಮೈಸೂರು ಇಲ್ಲಿ ದಿನಾಂಕ 15-01-2014 ರಿಂದ ಪ್ರಾರಂಭವಾಗುವುದು.

ಅನುಬಂಧ-ಬಿ.ಯಲ್ಲಿ 5 ಅಭ್ಯರ್ಥಿಗಳ ಆಯ್ಕೆಯ ಕುರಿತು ಪರಿಶೀಲಿಸಲು ಮೂಲ ದಾಖಲೆಗಳ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಯನ್ನು ಬೆಂಗಳೂರಿನ ಅರಣ್ಯ ಭವನದಲ್ಲಿ ದಿನಾಂಕ 26-12-2013 ರಂದು ನಡೆಸಲಾಗುವುದು. ಈ 5 ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳೊಂದಿಗೆ ಮತ್ತು ತಮ್ಮ ಐ.ಡಿ. ಕಾರ್ಡಿನೊಂದಿಗೆ ಈ ಕಚೇರಿಗೆ ಸದರಿ ದಿನಾಂಕದಂದು ಹಾಜರಾಗಲು ಸೂಚಿಸಲಾಗಿದೆ. ಈ ಮಾಹಿತಿಯನ್ನು ಅರಣ್ಯ ಇಲಾಖೆಯ website: www.karnatakaforest.gov.in ನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ.

ಬೆಂಗಳೂರು,
ದಿನಾಂಕ: 20 -12-2013

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಮುಖ್ಯಸ್ಥರು, ಅರಣ್ಯ ಪಡೆ)**
**ಹಾಗೂ ಆಯ್ಕೆ ಪ್ರಾಧಿಕಾರ.**